

ಕಾಣಿಸಿತು. ಮುಖ್ಯ ಅತಿಥಿಗಳು ಆಗಮಿಸಿದ್ದರು. ಬಂದವರೇ ಮೂತ್ರಾಲಯ ಎತ್ತ ಇದೆ ಎಂದು ನೋಡುತ್ತಿದ್ದರು. ವಯಸ್ಸಾಗಿದ್ದ ಅವರು ಟ್ರಾಫಿಕ್ ಜಾಮ್‌ನಲ್ಲಿ ಸಿಕ್ಕಿಹಾಕಿಕೊಂಡ ಕಾರಣ ಸಮಯಕ್ಕೆ ಸರಿಯಾಗಿ ಮೂತ್ರಕ್ಕೆ ಹೋಗಲಾಗದೆ ವೇದನೆಯಲ್ಲಿದ್ದುದು ಕಂಡಿತು. ಆಯೋಜಕರಿಗೆ ಈ ಗಡಿಬಿಡಿಯಲ್ಲಿ ಈ ಬಗೆಯ ಕ್ಷೇಮ ವಿಚಾರಿಸಿಕೊಳ್ಳುವುದು ಮರೆತೇ ಹೋಗಿತ್ತು. ಕೊನೆಗೆ ಅತಿಥಿಗಳೇ ಬಾಯಿ ಬಿಟ್ಟು ಕೇಳಬೇಕಾಯಿತು.

ಕೊನೆಗೂ ಬಂದರಲ್ಲ ಅಂತ ಅವರನ್ನು ಸ್ಟೇಜ್ ಮೇಲಕ್ಕೆ ಕರೆಯಲು ಉತ್ಸುಕರಾಗಿದ್ದ ಆಯೋಜಕರು, 'ಅದಕ್ಕೇನಂತೆ ಬನ್ನಿ ಸಾರ್' ಅಂತ ಅವರನ್ನು ಶೌಚಾಲಯದ ಕಡೆ ಕರೆದುಕೊಂಡು ಹೋದರು. ಕಾರ್ಯಕ್ರಮ ಶುರುವಾಯ್ತು ಅಂತ ನಿಡುಸುಯ್ದು ಎದ್ದು ನಿಂತಿದ್ದ ಎಲ್ಲ ಸಭಿಕರು 'ಮೂತ್ರ ಕಾರ್ಯಕ್ರಮ' ಮುಗಿಯಲಿ ಅಂತ ಮತ್ತೆ ಕುಳಿತುಕೊಂಡರು.

ದೊಡ್ಡ ರೇಷ್ಮೆ ಸೀರೆಗಳಲ್ಲಿ ಅಲಂಕೃತರಾಗಿದ್ದ ಕೆಲವು ಲಲನಾಮಣಿಯರು ಸ್ಟೇಜಿನ ಪಕ್ಕಕ್ಕೆ ಹೋಗಿ ಮತ್ತೊಮ್ಮೆ ಮೇಕಪ್ ಮಾಡಿಕೊಂಡರು. ನಿರೂಪಕಿ ಒಮ್ಮೆ ಕೆನೆದು ಸ್ವಾಗತ ಭಾಷಣ ಮಾಡಲು ಬರೆದಿಟ್ಟುಕೊಂಡು ಬಂದಿದ್ದ ಹಾಳೆಗಳನ್ನೆಲ್ಲ ಮತ್ತೆ ಜೋಡಿಸಿಕೊಂಡು ತಯಾರಾದಳು. ಕರೆದ ಕೂಡಲೆ, ಆಹ್ವಾನಿತರಾಗಿ ಬಂದ ನಾಲ್ವರು ಅತಿಥಿಗಳಿಗೆ ಹೂಗುಚ್ಛವನ್ನು ಕೊಡಲು ನಿಯೋಜಿತರಾದವರೆಲ್ಲ ಹೋಗಿ ಸಾಲಾಗಿ ಸ್ಟೇಜಿನ ಬದಿಯಲ್ಲಿ ನಿಂತರು. ಅಷ್ಟರಲ್ಲಿ ಅತಿಥಿಗಳು ಬಂದು ಎಲ್ಲರಿಗೂ ಒಮ್ಮೆ ಕೈ ಮುಗಿದು ತಮ್ಮ ಪಟಾಲಂ ಜೊತೆ ವೇದಿಕೆಯೇರಿ ಕುಳಿತರು. ಉದ್ಘಾಟನೆಯನ್ನು ಸರಸ್ವತಿ ಪ್ರಾರ್ಥನೆಯ ಮೂಲಕ ಶುರು ಮಾಡಲಾಯಿತು.

ಮೊದಲ ಬಾರಿಗೆ ನನ್ನ ಕೈಗಳು ಸಣ್ಣಗೆ ಬೆವರಿದವು. ಅಲ್ಲಿದ್ದವರೆಲ್ಲ ಭಾವಪರವಶರಾದಂತೆ ಸದ್ದು ಮಾಡದೆ ಕುಳಿತದ್ದನ್ನು ನೋಡಿ ಓಹೋ ಇವರುಗಳಿಗೆ ರಸಭಂಗವಾಗಬಹುದೇ ಎಂದು ಯೋಚಿಸಿದೆ. ಬೆವರು ಹರಿಸಿ ಓಡಾಡುತ್ತಿದ್ದ ಆಯೋಜಕರುಗಳು ತಾನೇ ಮನುಷ್ಯರಲ್ಲವೇ? ಅವರುಗಳಿಗೆ ಅದೆಷ್ಟು ನಿರಾಶೆಯಾಗಬಹುದು ಎನ್ನಿಸಿತು. ಎಪ್ಪತ್ತರ ಅಂಚಿನಲ್ಲಿದ್ದ ಮುಖ್ಯ ಅತಿಥಿಗಳು ಏನಾದರೂ ಬರೆದಿರಲಿ, ಈಗ ವಯಸ್ಸಾದ ಕಾರಣವೋ ಅಥವಾ ಅನಾರೋಗ್ಯದ ಕಾರಣವೋ ಗುಬ್ಬಚ್ಚಿಯಂತೆ ತಮ್ಮ ಕುರ್ಚಿಗಂಟಿ ಕೂತು, ವೇದಿಕೆಯ ಮೇಲೆ ಮಾತಾಡುತ್ತಿದ್ದ ಜನರ ಮಾತನ್ನು ತಮ್ಮ ಅರೆ ಬರೆ ಕಿವುಡು ಕಿವಿಗಳ ಮೂಲಕ ಕೇಳಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದುದನ್ನು ಗಮನಿಸಿದೆ. 'ಬಡ್ಡೀ ಮಗಂದು... ಮನುಷ್ಯನ ಜೋರೆಲ್ಲ ವಯಸ್ಸಿನಲ್ಲಿದ್ದಾಗ' ಅನ್ನಿಸಿ ನಗು ಬಂತು.

'ತುಂಬ ತಡವಾಗಿ ಶುರು ಮಾಡಿದ್ದಕ್ಕೆ ಕ್ಷಮೆಯಿರಲಿ. ಆದ್ರೂ ಬಂದ ಅತಿಥಿಗಳನ್ನು ಸ್ವಾಗತ ಮಾಡದೆ ಇರಕ್ಕಾಗತ್ತಾ... ಹಿ ಹಿ ಹಿ...' ಅಂತ ಸ್ವಾಗತ ಮಾಡಕ್ಕೆ ಶುರು ಮಾಡಿದ ಮುಖ್ಯ ಆಯೋಜಕನ ಮುಖದಲ್ಲಿ ಇಷ್ಟಗಲದ ಮಂದಹಾಸ. ಕಷ್ಟ ಪಟ್ಟು ಮಾಡಿದ್ದ ಎಲ್ಲ ಕೆಲಸಗಳ ಕಾರಣ ಕೊನೆಗೂ ಅವನು ವೇದಿಕೆಯ ಲೈಮ್ ಲೈಟ್‌ನಲ್ಲಿ ನಿಂತಿದ್ದ. ಬಿಟ್ಟಾನೆಯೇ?